# ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ:** ಶೇಕಡಾ 75% ರಷ್ಟು ಹಾಗೂ ಅದಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳಿಗೆ ಮಾಹೆಯಾನ ರೂ. 1000/- ಮಾಸಾಶನ ನೀಡುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರಿ ಆದೇಶ ಸಂಖ್ಯೆ: ಕಂಇ 134 ಎಂಎಸ್‌ಟಿ 2007. ದಿನಾಂಕ:10/09/2007.

2)ಸರ್ಕಾರಿ ಆದೇಶ ಸಂಖ್ಯೆ ಮಮಇ/107/ಪಿ.ಹೆಚ್.ಪಿ. 2003, ದಿನಾಂಕ: 11ನೇ ಜುಲೈ2003.

---///---

2008-09 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಶೇಕಡಾ 75% ರಷ್ಟು ಹಾಗೂ ಅದಕ್ಕಿಂತ ಹೆಚ್ಚಿನ ಅಂಗವೈಕಲ್ಯ ಅನುಭವಿಸುತ್ತಿರುವ ಅಂಗವಿಕಲರಿಗೆ ಹಾಲಿ ನೀಡುತ್ತಿರುವ ರೂ.400.00 ಗಳ ಮಾಸಾಶನವನ್ನು ರೂ.1000.00ಕ್ಕೆ ಹೆಚ್ಚಿಸಲು ಘೋಷಿಸಲಾಗಿದೆ.

**ಓದಲಾದ ಕ್ರಮ ಸಂಖ್ಯೆ (1)ರಂತೆ** ಪ್ರಸ್ತುತ ಶೇಕಡಾ 40 ಹಾಗೂ ಅದಕ್ಕಿಂತ ಹೆಚ್ಚು ಅಂಗವಿಕಲತೆಯುಳ್ಳ ಅಂಗವಿಕಲರಿಗೆ ಮಾಹೆಯಾನ ಮಾಶಾಸನವನ್ನು ರೂ.200.00ಗಳಿಂದ ರೂ.400.00 ಗಳ ನೀಡಲಾಗುತ್ತಿದೆ.

**ಓದಲಾದ ಕ್ರಮ ಸಂಖ್ಯೆ (2) ರಂತೆ** ವಿವಿಧ ಬಗೆಯ ಅಂಗವಿಕಲತೆಗಳನ್ನು ಗುರುತಿಸಿ ಅಂಗವಿಕಲ ಪ್ರಮಾಣ ಪತ್ರಗಳನ್ನು ನೀಡಲು ವೈಧ್ಯಕೀಯ ಮಂಡಳಿಗಳನ್ನು ರಚಿಸಲಾಗಿರುತ್ತದೆ.

ಈ ಯೋಜನೆಯಡಿ ಹಾಲಿ ಮಾಶಾಸನ ಪಡೆಯುತ್ತಿರುವ ಹಾಗೂ ಶೇಕಡಾ 75% ರಷ್ಟು ಹಾಗೂ ಅದಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವುದಕ್ಕಾಗಿ ಈಗಾಗಲೇ ವೈದ್ಯಕೀಯ ಪ್ರಮಾಣ ಪತ್ರ ಪಡೆದಿದ್ದು, ಹಾಲಿ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ರೂ.1000.00 ಮಾಸಾಶನ ನೀಡಲು ತೀರ್ಮಾನಿಸಲಾಗಿದೆ.

ಹಾಲಿ ಯೋಜನೆಯಡಿ ಮಾಶಾಸನವನ್ನು ಪಡೆಯುತ್ತಿರುವ ಫಲಾನುಭವಿಗಳು ಶೇಕಡಾ 75% ರಷ್ಟು ಹಾಗೂ ಅದಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿದ್ದಕ್ಕಾಗಿ ಹೊಸದಾಗಿ ಕೋರಿಕೆ ಸಲ್ಲಿಸಿದಲ್ಲಿ ಅಂತಹ ಫಲಾನುಭವಿಗಳು ಹಾಗೂ ಹೊಸ ಅಭ್ಯರ್ಥಕರು ವೈದ್ಯಕೀಯ ಮಂಡಳಿಯಿಂದ ಧೃಡೀಕರಣ ಪತ್ರವನ್ನು ಪಡೆದ ನಂತರ ರೂ.1000.00 ಗಳ ಮಾಸಾಶನಕ್ಕೆ ಅರ್ಹರಾಗುತ್ತಾರೆಂದು ಸಹಾ ತೀರ್ಮಾನಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಶೇಕಡಾ 75% ರಷ್ಟು ಹಾಗೂ ಅದಕ್ಕಿಂತ ಹೆಚ್ಚು ಅಂಗವಿಕಲತೆಯುಳ್ಳ ಅಂಗವಿಕಲರ ಬವಣೆಯನ್ನು ಸರ್ಕಾರವು ಮನಗಂಡು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 3 ಪಿಹೆಚ್‌ಪಿ 2008 ಬೆಂಗಳೂರು, ದಿನಾಂಕ:29/08/2008.**

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, **ರಾಜ್ಯದಲ್ಲಿನ ಶೇಕಡಾ 75% ರಷ್ಟು ಹಾಗೂ ಅದಕ್ಕಿಂತ ಹೆಚ್ಚು ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಮಾತ್ರ** ಆರ್ಥಿಕ ನೆರವು ನೀಡಲು ಹಾಲಿ ನೀಡುತ್ತಿರುವ **ಮಾಸಾಶನವನ್ನು ರೂ.400.00 ರಿಂದ ರೂ.1000.00 (ಒಂದು ಸಾವಿರ ರೂ.ಗಳು ಮಾತ್ರ)** ಗಳಿಗೆ ತಕ್ಷಣದಿಂದಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದ ವರೆಗೆ ಹೆಚ್ಚಿಸಿ ಆದೇಶಿಸಲಾಗಿದೆ.

ಈಗಾಗಲೇ ಯೋಜನೆಯಡಿ ಶೇಕಡಾ 75% ರಷ್ಟು ಹಾಗೂ ಅದಕ್ಕಿಂತ ಹೆಚ್ಚು ಅಂಗವೈಕಲತೆಯುಳ್ಳ ವ್ಯಕ್ತಿಗಳು ವೈದ್ಯಕೀಯ ಪ್ರಮಾಣ ಪತ್ರ ಪಡೆದಿದ್ದರೆ, ಹಾಲಿ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ಈ ಆದೇಶದನ್ವಯ ರೂ.1000.00 ಮಾಸಾಶನವನ್ನು ನೀಡತಕ್ಕದ್ದು.